ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/01/ಇಎಸ್‌ಟಿ(9)/2020-21 1443

ಆಯುಕ್ತರವರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560 001.
ದಿನಾಂಕ: 02-09-2020.

## ಹಿಂಬರಹ

ಕರ್ನಾಟಕ ಸರ್ಕಾರದ ನಡವಳಿಗಳು:ಸರ್ಕಾರಿ ಆದೇಶದ ಪತ್ರ ಸಂಖ್ಯೆ:ಆಇ 360 ವೆಚ್ಚ - 12/2020 (ಇ-ಆಫೀಸ್) ಬೆಂಗಳೂರು ದಿನಾಂಕ:13-07-2020 ರ ಪ್ರತಿಯನ್ನು ಮಾಹಿತಿಗಾಗಿ ಈ ಕೆಳಕಂಡವರಿಗೆ ಕಳುಹಿಸಿಕೊಡಲಾಗಿದೆ.

1. ಈ ಇಲಾಖೆಯ ಅಧೀನಕ್ಕೊಳಪಡುವ ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು, ಸರ್ಕಾರಿ ಪಾಲಿಟೆಕ್ನಿಕ್, ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳು, ಸ್ಟೇರಿಕ್ ಸಂಸ್ಥೆ, ಬೆಂಗಳೂರು, ಸರ್ಕಾರಿ ಗಣಿ ಶಿಕ್ಷಣ ಶಾಲೆ, ಕೆ.ಜಿ.ಎಫ್ ಸಂಸ್ಥೆಗಳ ಪ್ರಿನ್ಸಿಪಾಲರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ [ಇಲಾಖಾ ವೆಬ್‌ಸೈಟ್ ಮುಖಾಂತರ]
2. ಈ ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳಿಗೆ, ಜಂಟಿ ನಿರ್ದೇಶಕರು(ಆಡಳಿತ), ಆಡಳಿತಾಧಿಕಾರಿ, ಸಹಾಯಕ ಆಡಳಿತಾಧಿಕಾರಿ (1), (2) ಹಾಗೂ (3), ಸಾರ್ವಜನಿಕ ಸಂಪರ್ಕಾಧಿಕಾರಿ ಹಾಗೂ ರಿಜಿಸ್ಟ್ರಾರ್ (ಆಡಳಿತ) ಮಾಹಿತಿಗಾಗಿ.
3. ಆಯುಕ್ತರ ಆಪ್ತ ಶಾಖೆಗೆ
4. ನಿರ್ದೇಶಕರ ಆಪ್ತ ಶಾಖೆಗೆ
5. ಈ ನಿರ್ದೇಶನಾಲಯದ ಕಟ್ಟಡ ವಿಭಾಗಕ್ಕೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ
6. ಈ ನಿರ್ದೇಶನಾಲಯದ ಇ-ಆಡಳಿತ ವಿಭಾಗಕ್ಕೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ

ಆಡಳಿತಾಧಿಕಾರಿ

1381 31/8/2020
1654716/2020
EST-09
ಸಂಖ್ಯೆ 545
28 AUG 2020

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: COVID-19 ಮಹಾಮಾರಿ ಹಿನ್ನೆಲೆಯಲ್ಲಿ ಸಿವಿಲ್ ಕಾಮಗಾರಿಗಳ ಅನುಷ್ಠಾನದಲ್ಲಿ ಸಡಿಲಿಕೆ ನೀಡುವ ಕುರಿತು.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 09 ಪಿಸಿಎಲ್ 2004(I) ದಿನಾಂಕ: 06-08-2005.
2. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 09 ಪಿಸಿಎಲ್ 2004(II) ದಿನಾಂಕ: 06-08-2005.
3. ಸಿವಿಲ್ ಗುತ್ತಿಗೆದಾರರ ಮನವಿಗಳು.

---------

**ಪ್ರಸ್ತಾವನೆ:**

ಮೇಲೆ ಓದಲಾದ ಸರ್ಕಾರದ ಆದೇಶ (1) ಮತ್ತು (2)ರಲ್ಲಿರುವ ಅನುಬಂಧಗಳ ಮಾದರಿ ಟೆಂಡರ್ ದಾಖಲೆಗಳನ್ನು ರಾಜ್ಯದಲ್ಲಿನ ಎಲ್ಲಾ ಸರಕುಗಳು ಮತ್ತು ಸಿವಿಲ್ ಕಾಮಗಾರಿಗಳ ಸಂಗ್ರಹಣೆಯಲ್ಲಿ ಸಂಗ್ರಹಣಾ ಪ್ರಾಧಿಕಾರಗಳು ಬಳಕೆ ಮಾಡುವುದನ್ನು ಕಡ್ಡಾಯಗೊಳಿಸಲಾಗಿದೆ. ಪ್ರಸ್ತುತ ಹಲವಾರು ಸಿವಿಲ್ ಗುತ್ತಿಗೆದಾರರಿಂದ ಹಾಗೂ ಗುತ್ತಿಗೆದಾರರ ಸಂಘ/ಸಂಸ್ಥೆಗಳಿಂದ COVID-19 ಮಹಾಮಾರಿಯ ಹಿನ್ನೆಲೆಯಲ್ಲಿ ಮಾಡಲಾದ ಲಾಕ್‌ಡೌನ್ ಮತ್ತು ನಂತರ ಉದ್ಭವಿಸಿದ ಕಾರಣಗಳಿಂದ ಸರಕುಗಳು ಮತ್ತು ಸೇವೆಗಳ ಸರಬರಾಜು ವ್ಯವಸ್ಥೆಯಲ್ಲಿ ತೊಂದರೆಯಾದ ಹಿನ್ನೆಲೆಯಲ್ಲಿ ಕಾಮಗಾರಿಗಳನ್ನು ಕಾರ್ಯಗತಗೊಳಿಸುವಲ್ಲಿ ಮತ್ತು ಸಾಮಗ್ರಿಗಳ ಸರಬರಾಜಿನಲ್ಲಿ ವಿಳಂಬವಾಗಿರುವ ಅವಧಿಯನ್ನು FORCE MAJEURE ಆಗಿ ಪರಿಗಣಿಸುವುದನ್ನು ಸೇರಿದಂತೆ ಹಲವು ಸಡಿಲಿಕೆಗಳನ್ನು ನೀಡುವಂತೆ ಕೋರಲಾಗಿರುತ್ತದೆ. ಸದರಿ ಮನವಿಗಳನ್ನು ಮತ್ತು ಭಾರತ ಸರ್ಕಾರದಿಂದ ಈ ಕುರಿತು ನೀಡಲಾದ ಸಡಿಲಿಕೆ/ರಿಯಾಯಿತಿಗಳನ್ನು ಪರಿಶೀಲಿಸಿ ಹಾಗೂ ಈ ಸಂಬಂಧ ನಿರ್ದಿಷ್ಟ ಪಡಿಸಲಾಗಿರುವ ಮಾದರಿ ಟೆಂಡರ್ ದಾಖಲೆಗಳಲ್ಲಿ ಅವಕಾಶ ಕಲ್ಪಿಸಲು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆಇ 360 ವೆಚ್ಚ-12/2020 (ಇ-ಆಫೀಸ್) ಬೆಂಗಳೂರು, ದಿನಾಂಕ: 13-07-2020**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, COVID-19 ಮಹಾಮಾರಿಯ ಪರಿಣಾಮದಿಂದಾಗಿ ಸರಕು ಸರಬರಾಜು ಮತ್ತು ಸಿವಿಲ್ ಕಾಮಗಾರಿಗಳ ಗುತ್ತಿಗೆಗಳ ಸಂಬಂಧದಲ್ಲಿ ಈ ಕೆಳಗಿನಂತೆ ನಿರ್ದಿಷ್ಟ ಅವಧಿಗೆ ತಾತ್ಕಾಲಿಕವಾಗಿ ಗುತ್ತಿಗೆ ಒಪ್ಪಂದದಲ್ಲಿ ಬದಲಾವಣೆಗಳನ್ನು ಅಳವಡಿಸಿಕೊಳ್ಳಲು ಆದೇಶಿಸಿದೆ.

1. ಅವಧಿ ವಿಸ್ತರಣೆ:

a) ರಾಜ್ಯದಲ್ಲಿ ದಿನಾಂಕ:20-02-2020 ಮತ್ತು ಅದರ ನಂತರ ಗುತ್ತಿಗೆ ಹೊಣೆಗಾರಿಕೆ ಮುಕ್ತಾಯವಾಗಬೇಕಾದ ಸರಕು ಮತ್ತು ಸೇವೆಗಳು ಹಾಗೂ ಸಿವಿಲ್ ಕಾಮಗಾರಿಗಳ ಒಪ್ಪಂದಗಳ ಸಂಬಂಧದಲ್ಲಿ, ಈ ಕುರಿತಾಗಿ ನಿಯಮಾನುಸಾರ ಸಂಬಂಧಪಟ್ಟ ಎಲ್ಲಾ ಪಕ್ಷಗಾರರು (Parties) ಅಗತ್ಯ ಪ್ರಕ್ರಿಯೆಯನ್ನು ಪೂರೈಸುವ ಷರತ್ತಿಗೆ ಒಳಪಟ್ಟು ಕನಿಷ್ಟ 3 ತಿಂಗಳು ಹಾಗೂ ಗರಿಷ್ಟ 6 ತಿಂಗಳವರೆಗಿನ ಅವಧಿಯನ್ನು ಮಾದರಿ ಟೆಂಡರ್ ದಾಖಲೆಗಳಲ್ಲಿನ clauseಗಳಿಗೆ ಅನುಗುಣವಾಗಿ Employers Risk ಅಥವಾ Compensation Eventಆಗಿ ಪರಿಗಣಿಸಲು ಹಾಗೂ ಉಳಿದಂತೆ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳು ಅಥವಾ ಯೋಜನೆಗಳಡಿ ಮಾಡಿಕೊಳ್ಳಲಾದ ಒಪ್ಪಂದಗಳು ಮತ್ತು ಪಿ.ಪಿ.ಪಿ.ಗುತ್ತಿಗೆ ಒಪ್ಪಂದಗಳ ಸಂಬಂಧದಲ್ಲಿ FORCE MAJEURE ಅವಧಿಯಾಗಿ ಪರಿಗಣಿಸಿ ಗುತ್ತಿಗೆದಾರರಿಗೆ/ರಿಯಾಯಿತಿದಾರರಿಗೆ/ಸರಬರಾಜುದಾರರಿಗೆ ಯಾವುದೇ ವೆಚ್ಚ ಅಥವಾ ದಂಡವಿಲ್ಲದೇ ಅವಧಿ ವಿಸ್ತರಣೆ ಮಾಡಲು ತಿಳಿಸಿದೆ.

b) ಈ ರೀತಿ ವಿಸ್ತರಣೆ ಮಾಡಬೇಕಾದ ಅವಧಿ (ಕನಿಷ್ಟ 3 ತಿಂಗಳು ಹಾಗೂ ಗರಿಷ್ಟ 6 ತಿಂಗಳ ಮಧ್ಯೆ)ಯನ್ನು ಆಯಾ ಸರಕು/ಸೇವೆಯ ಸರಬರಾಜು ಮತ್ತು ಕಾಮಗಾರಿಗಳನ್ನು ಕಾರ್ಯಗತಗೊಳಿಸುವಲ್ಲಿನ ಪರಿಸ್ಥಿತಿಗಳನ್ನಾಧರಿಸಿ ಆಯಾ ಸಂಗ್ರಹಣಾ ಪ್ರಾಧಿಕಾರಗಳು ನಿರ್ಧರಿಸತಕ್ಕದ್ದು.

c) ದಿನಾಂಕ: 19-02-2020ರಂದು ಸಂಬಂಧಪಟ್ಟ ಯಾವುದೇ ಪಕ್ಷಗಾರರು (Parties) ಗುತ್ತಿಗೆ ಒಪ್ಪಂದದ ಕಾರ್ಯವನ್ನು ನಿರ್ವಹಿಸುವಲ್ಲಿ ವಿಫಲ (Default)ವಾಗದಿದ್ದ ಪಕ್ಷದಲ್ಲಿ ಮಾತ್ರ ಸದರಿ ಅವಧಿ ವಿಸ್ತರಣೆಯು ಅನ್ವಯವಾಗತಕ್ಕದ್ದು. ಅಲ್ಲದೇ, ಇದು COVID-19 ಮಹಾಮಾರಿ ಹಿನ್ನೆಲೆಯಲ್ಲಿ ಸರ್ಕಾರದಿಂದ ಘೋಷಿಸಲಾದ ಲಾಕ್‌ಡೌನ್ ಮತ್ತು ಅದಕ್ಕೆ ಸಂಬಂಧಪಟ್ಟ ನಿರ್ಬಂಧಗಳ ಸಂಬಂಧದಲ್ಲಿ ಉಂಟಾದ ಅನಾನುಕೂಲತೆಗೆ ಮಾತ್ರ ಅನ್ವಯವಾಗುತ್ತದೆಯಲ್ಲದೇ, ಬೇರೆ ಯಾವುದೇ ಕಾರಣದಿಂದ ಉಂಟಾದ ವಿಳಂಬಕ್ಕೆ ಅಥವಾ ವಿಫಲತೆಗೆ ಅನ್ವಯವಾಗುವುದಿಲ್ಲ.

d) ಮೇಲ್ಕಂಡಂತೆ ವಿಸ್ತರಿಸಲಾದ ಅವಧಿಯು, ಸದರಿ ಅವಧಿಯ ನಂತರ ಸ್ವಯಂ ಆಗಿ ಮುಕ್ತಾಯವಾಗುತ್ತದೆ.

2. ಭದ್ರತಾ ಠೇವಣಿ ಹಿಂಪಾವತಿ:

a) ಒಪ್ಪಂದದ ಅನುಸಾರ ಪಡೆಯಲಾಗಿರುವ ಭದ್ರತಾ ಠೇವಣಿಗಳನ್ನು ನಿಯಮಾನುಸಾರ ಆಯಾ ಒಪ್ಪಂದದಲ್ಲಿನ ಹೊಣೆಗಾರಿಕೆ ಮುಕ್ತಾಯವಾಗುವವರೆಗೆ ಗುತ್ತಿಗೆದಾರರಿಗೆ ಹಿಂದಿರುಗಿಸಲು

ಅವಕಾಶವಿರುವುದಿಲ್ಲ. ಆದರೆ, COVID-19 ಮಹಾಮಾರಿ ಕಾರಣದಿಂದ ಈ ಕೆಳಕಂಡ ಸಂದರ್ಭಗಳಲ್ಲಿ-

(i) ಯಾವುದೇ ಗುತ್ತಿಗೆ ಹೊಣೆಗಾರಿಕೆಯನ್ನು ನಿರ್ವಹಿಸುವಲ್ಲಿ ವಿಫಲ (Default)ವಾಗಿರದ ಗುತ್ತಿಗೆದಾರರು ನಿಯಮಾನುಸಾರ ಅರ್ಜಿ ಸಲ್ಲಿಸಿದಲ್ಲಿ; ಅಥವಾ

(ii) ಗುತ್ತಿಗೆದಾರರಿಂದ ಅವಧಿ ವಿಸ್ತರಣೆ/ FORCE MAJEURE Clause ಅಡಿ ಮನವಿ ಸಲ್ಲಿಸಿ, ಆ ಕುರಿತಾದ ಎಲ್ಲಾ ಅಗತ್ಯ ಪ್ರಕ್ರಿಯೆಯನ್ನು ಪೂರೈಸಿದಲ್ಲಿ,

ನಿಯಮಾನುಸಾರ ಅಗತ್ಯ ಪ್ರಕ್ರಿಯೆಯನ್ನು ಅನುಸರಿಸುವ ಷರತ್ತಿಗೆ ಒಳಪಟ್ಟು ಗುತ್ತಿಗೆದಾರರು ಒದಗಿಸಿದ ಒಟ್ಟು ಭದ್ರತಾ ಠೇವಣಿಯಲ್ಲಿ ಗುತ್ತಿಗೆದಾರರು / ರಿಯಾಯಿತಿದಾರರು / ಸರಬರಾಜುದಾರರು ನಿರ್ವಹಿಸಿದ ಕಾಮಗಾರಿ/ಸರಬರಾಜು ಪ್ರಮಾಣದ ಅನುಪಾತ(proportionate)ಕ್ಕೆ ಅನುಸಾರವಾಗಿ ಭದ್ರತಾ ಠೇವಣಿ ಮೊತ್ತವನ್ನು ಹಿಂದಿರುಗಿಸಲು ಕ್ರಮವಹಿಸತಕ್ಕದ್ದು.

b) ಮೇಲ್ಕಂಡ ಭದ್ರತಾ ಠೇವಣಿ ಹಿಂಪಾವತಿ ಕ್ರಮವು ಸರ್ಕಾರದಿಂದ ಲಾಕ್‌ಡೌನ್ ಮತ್ತು ಅದಕ್ಕೆ ಸಂಬಂಧಿಸಿದಂತೆ ಹೊರಡಿಸಲಾದ ಆದೇಶಗಳ ಹಿನ್ನೆಲೆಯಲ್ಲಿ ಸದರಿ ಅವಧಿಯಲ್ಲಿ ನಿರ್ವಹಿಸಲಾಗದ ಸಾಧನೆ(non performance)ಗೆ ಮಾತ್ರ ಅನ್ವಯವಾಗುತ್ತದೆ.

c) ಆದರೆ, ಗುತ್ತಿಗೆದಾರರು/ರಿಯಾಯಿತಿದಾರರು/ಸರಬರಾಜುದಾರರು ಒಪ್ಪಂದದ ಯಾವುದೇ ಅಂಶಗಳನ್ನು ಉಲ್ಲಂಘಿಸಿದಲ್ಲಿ, ಅಂಥವರ ವಿರುದ್ಧ ಗುತ್ತಿಗೆ ಕರಾರಿನ ಅನ್ವಯ ಸೂಕ್ತ ಕ್ರಮವನ್ನು ತೆಗೆದುಕೊಳ್ಳುವ ಅಧಿಕಾರವನ್ನು ಸಂಗ್ರಹಣಾ ಪ್ರಾಧಿಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಐ.ಎಸ್.ಎನ್.ಪ್ರಸಾದ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಆರ್ಥಿಕ ಇಲಾಖೆ

ಇವರಿಗೆ,

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸಲು

ಪ್ರತಿ:

1. ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ

2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಸರ್ಕಾರದ ಕಾರ್ಯದರ್ಶಿಗಳು
3. ಮಹಾಲೇಖಾಪಾಲರು (ಎ&ಇ), ಕರ್ನಾಟಕ ಸರ್ಕಾರ, ಬೆಂಗಳೂರು
4. ಕಾರ್ಯದರ್ಶಿಗಳು, ಕರ್ನಾಟಕ ವಿಧಾನ ಸಭೆ ಹಾಗೂ ಕರ್ನಾಟಕ ವಿಧಾನ ಪರಿಷತ್ತು
5. ರಿಜಿಸ್ಟ್ರಾರ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು
6. ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು
7. ಕಾರ್ಯದರ್ಶಿಗಳು, ಕರ್ನಾಟಕ ಲೋಕ ಸೇವಾ ಆಯೋಗ, ಬೆಂಗಳೂರು
8. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು
9. ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್
10. ರಾಜ್ಯದ ಎಲ್ಲಾ ಇಲಾಖಾ ಮುಖ್ಯಸ್ಥರು
11. ರಾಜ್ಯದ ಎಲ್ಲಾ ನಿಗಮ ಮತ್ತು ಮಂಡಳಿಗಳ ಕಾರ್ಯನಿರ್ವಾಹಣಾಧಿಕಾರಿಗಳು
12. ಆಂತರಿಕ ಆರ್ಥಿಕ ಸಲಹೆಗಾರರು
13. ಸರ್ಕಾರದ ಜಂಟಿ ಕಾರ್ಯದರ್ಶಿಗಳು/ಉಪ ಕಾರ್ಯದರ್ಶಿಗಳು / ವಿಶೇಷಾಧಿಕಾರಿಗಳು / ಅಧೀನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ
14. ಶಾಖೆಯ ರಕ್ಷ ಕಡತ / ಹೆಚ್ಚುವರಿ ಪ್ರತಿ.